# ಕರ್ನಾಟಕ ಸರ್ಕಾರ

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/482/2018/ಎ.ಆರ್.ಇ-11

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560001.
ದಿನಾಂಕ: 28ನೇ ಆಗಸ್ಟ್ 2023.

## -:: ಶಿಫಾರಸ್ಸು ::-

ವಿಷಯ: ಆಪಾದಿತ ಸರ್ಕಾರಿ ನೌಕರರಾದ ಶ್ರೀ ರಾಧಾಕೃಷ್ಣ, ಉಪ ವಲಯ ಅರಣ್ಯಾಧಿಕಾರಿ, ಬಿ.ಬಿ.ಎಂ.ಪಿ., ಯಲಹಂಕ ವಲಯ, ಬೆಂಗಳೂರು ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ: ಅಪಜೀ 119 ಅಇವಿ 2018, ಬೆಂಗಳೂರು, ದಿನಾಂಕ: 15.10.2018.

(2) ಉಪಲೋಕಾಯುಕ್ತ, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ.ಉಪಲೋಕ್-1/ಡಿಇ/ 482/2018, ಬೆಂಗಳೂರು, ದಿನಾಂಕ: 25/10/2018.

(3) ಅಪರ ನಿಬಂಧಕರು ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 23/08/2023.

*****

ಸರ್ಕಾರದ ಆದೇಶ ದಿನಾಂಕ: 15/10/2018 ರಂತೆ ಶ್ರೀ ರಾಧಾಕೃಷ್ಣ, ಉಪ ವಲಯ ಅರಣ್ಯಾಧಿಕಾರಿ, ಬಿ.ಬಿ.ಎಂ.ಪಿ., ಯಲಹಂಕ ವಲಯ, ಬೆಂಗಳೂರು (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರುಗಳು ಅಂದರೆ ಚಿಕ್ಕದಾಗಿ 'ಆ.ಸ.ನೌಕರರು' ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ:ಉಪಲೋಕ್–1/ಡಿಇ/482/2018, ಬೆಂಗಳೂರು, ದಿನಾಂಕ: 25/10/2018ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು–11 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ ಶ್ರೀ ರಾಧಾಕೃಷ್ಣ, ಉಪ ವಲಯ ಅರಣ್ಯಾಧಿಕಾರಿ, ಬಿ.ಬಿ.ಎಂ.ಪಿ., ಯಲಹಂಕ ವಲಯ, ಬೆಂಗಳೂರು ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

**ಅನುಬಂಧ–1**

**ದೋಷಾರೋಪಣೆ**

ಆಪಾದಿತ ಸರ್ಕಾರಿ ನೌಕರರಾದ ಶ್ರೀ ರಾಧಾಕೃಷ್ಣ ಆದ ನೀವು ಬೆಂಗಳೂರಿನ ಯಲಹಂಕ ಬಿಬಿಎಂಪಿ ವಲಯದಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ 2015ನೆಯ ಇಸವಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಫಿರ್ಯಾದಿಯಾದ ಬೆಂಗಳೂರು ನಗರದ ಮುತ್ಯಾಲನಗರದ ಸಂಖ್ಯೆ 63, 15ನೆಯ ಅಡ್ಡ ರಸ್ತೆಯ ನಿವಾಸಿಯಾದ ಶ್ರೀ ರಾಮಕೃಷ್ಣರೆಡ್ಡಿ ನವರ್ ರವರು 1ನೆಯ ದರ್ಜೆಯ ಸಿವಿಲ್ ಗುತ್ತಿಗೆದಾರರಾಗಿದ್ದು ಬೆಂಗಳೂರು ನಗರದ ಯಲಹಂಕ ನ್ಯೂ ಟೌನ್ ದೊಡ್ಡಬಳ್ಳಾಪುರ ರಸ್ತೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ನೌಕರರ ವಸತಿ ಗೃಹ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಗುತ್ತಿಗೆ ಆಧಾರದ ಮೇರೆಗೆ ಕೈಗೊಂಡಿದ್ದು ಕಾಮಗಾರಿ ನಡೆಸಲಾಗುವ ಸ್ಥಳದಲ್ಲಿ ಎರಡು ಕಾಡು ಮರಗಳಿದ್ದು, ಸದರಿ ಮರಗಳನ್ನು ತೆರವುಗೊಳಿಸುವ ಸಂಬಂಧ ದಿನಾಂಕ;6–11–2015ರಂದು ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿರುವ ಯುಟಿಲಿಟಿ ಕಟ್ಟಡದ 17ನೇ ಮಹಡಿಯಲ್ಲಿರುವ ಬಿಬಿಎಂಪಿ ಸಹಾಯಕ ಅರಣ್ಯಾಧಿಕಾರಿ ಯವರ ಕಛೇರಿಯಲ್ಲಿ ಸದರಿ ಎರಡು ಕಾಡು ಮರಗಳನ್ನು ತೆರವುಗೊಳಿಸುವ ಸಂಬಂಧ ಅರ್ಜಿ ಸಲ್ಲಿಸಿದ್ದು ಆ ಸಂಬಂಧವಾಗಿ ಫಿರ್ಯಾದಿಯು ನಿಮ್ಮನ್ನು ದಿನಾಂಕ: 07/12/2015 ರಂದು ಮೊಬೈಲ್ ಮುಖಾಂತರ ಸಂಪರ್ಕಿಸಿದಾಗ ನೀವು ರೂ. 15,000/– ಅಕ್ರಮ ಸಂಭಾವನೆಯನ್ನು ಕೇಳಿ ನಂತರ ಆ ಮೊತ್ತವನ್ನು ರೂ. 7,000/– ಗಳಿಗೆ ಕಡಿತಗೊಳಿಸಿದ್ದು ತರುವಾಯ ದಿನಾಂಕ: 10/12/2015 ರಂದು ಮೊಬೈಲ್ ಮುಖಾಂತರ ಫಿರ್ಯಾದಿಯು ನಿಮ್ಮನ್ನು ಸಂಪರ್ಕಿಸಿದಾಗ ನೀವು ಮತ್ತೆ ಪುನ: ಅಕ್ರಮ ಸಂಭಾವನೆಯನ್ನು ಕೊಡುವಂತೆ ಒತ್ತಾಯಿಸಿ ಅದೇ

ದಿನ ಎಂದರೆ ದಿನಾಂಕ: 10/12/2015 ರಂದು ಮದ್ಯಾಹ್ನ 3:30 ಗಂಟೆಗೆ ಫಿರ್ಯಾದಿಯು ನಿಮ್ಮನ್ನು ನಿಮ್ಮ ಕಛೇರಿಯಲ್ಲಿ ಭೇಟಿ ಮಾಡಿದಾಗ ನೀವು ಫಿರ್ಯಾದಿಯಿಂದ ರೂ. 2,000/- ಗಳನ್ನು ಅಕ್ರಮ ಸಂಭಾವನೆಯ ಕಂತಾಗಿ ಒತ್ತಾಯಿಸಿ ಪಡೆದುಕೊಂಡು ಮತ್ತೆ ಪುನ: ರೂ. 5,000/- ಗಳ ಅಕ್ರಮ ಸಂಭಾವನೆಗೆ ಒತ್ತಾಯಿಸಿದ್ದು ತರುವಾಯ ದಿನಾಂಕ: 11/12/2015 ರಂದು ನೀವು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ವಿರೇಶ್ ಚಿತ್ರ ಮಂದಿರದ ಬಳಿ ಇರುವ ಗೋದ್ರೇಜ್ ಶೋರೂಂ ಬಳಿ ಫಿರ್ಯಾದಿಯಿಂದ ಮಿಕ್ಕುಳಿದ ಅಕ್ರಮ ಸಂಭಾವನೆ ರೂ. 5,000/- ಗಳನ್ನು ಅಂದು ರಾತ್ರಿ ಸುಮಾರು 8:30 ರಿಂದ 8:35ರ ಅವದಿಯಲ್ಲಿ ನೀವು ಫಿರ್ಯಾದಿಯಿಂದ ಒತ್ತಾಯಿಸಿ ಪಡೆದುಕೊಂಡು ನಂತರ ಬೆಂಗಳೂರು ನಗರ ವಿಭಾಗದ ಲೋಕಾಯುಕ್ತ ಆರಕ್ಷಕ ಠಾಣೆಯ ಅಪರಾಧ ಸಂಖ್ಯೆ: 75/2015 ರಲ್ಲಿನ ತನಿಖಾಧಿಕಾರಿಯಾದ ಆರಕ್ಷಕ ನಿರೀಕ್ಷಕರ ಮುಂದೆ ಸದರಿ ಪ್ರಕರಣದ ತನಿಖಾ ಕಾಲದಲ್ಲಿ ನೀವು ನಿಮ್ಮ ಬಳಿ ದಿನಾಂಕ: 11/12/2015 ರಂದು ರಾತ್ರಿ ಸುಮಾರು 8:30 ರಿಂದ 8:35 ಗಂಟೆಯ ಅವದಿಯಲ್ಲಿ ಹೊಂದಿದ್ದ ರೂ. 5,000/- ಗಳ ಬಗ್ಗೆ ನೀವು ತೃಪ್ತಿದಾಯಕ ಉತ್ತರವನ್ನು ನೀಡಲು ವಿಫಲರಾಗಿ ಕರ್ತವ್ಯಲೋಪನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(ii)ಮತ್ತು(iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

4. ಅನುಬಂಧ-1 ರಂತೆ ದೋಷಾರೋಪಣೆ ಮತ್ತು ಅನುಬಂಧ-2 ರಂತೆ ದೋಷಾರೋಪಣೆಯ ವಿವರಗಳು, ಅನುಬಂಧ-3 ರಂತೆ ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆ ಮಾಡಲು ಇಚ್ಛಿಸುವ ಸಾಕ್ಷಿದಾರರ ವಿವರಗಳು ಮತ್ತು ಅನುಬಂಧ-4 ರಂತೆ ಈ ವಿಚಾರಣೆಯಲ್ಲಿ ಹಾಜರುಪಡಿಸಲಿರುವ ದಾಖಲಾತಿಗಳ ವಿವರಗಳನ್ನೊಳಗೊಂಡಂತೆ ಸೂಚನಾ ಪತ್ರವನ್ನು ಆ.ಸ.ನೌಕರರಿಗೆ ಖುದ್ದು ಹಾಜರಾಗಬೇಕಾಗಿ ತಿಳಿಸುತ್ತಾ ಜಾರಿ ಮಾಡಲಾಗಿರುತ್ತದೆ. ಒಬ್ಬರು ಸಾಕ್ಷಿದಾರ-ಪಿ.ಡಬ್ಲ್ಯೂ-1 ರವರನ್ನು ವಿಚಾರಣೆಗೆ ಒಳಪಡಿಸಿ ನಿಶಾನೆ ಪಿ-1 ರಿಂದ ಪಿ-7 ರವರೆಗೆ ದಾಖಲಾತಿಗಳನ್ನು ಗುರುತಿಸಲಾಗಿದೆ. ಆ.ಸ.ನೌಕರರು ತಮ್ಮ ಲಿಖಿತ ಹೇಳಿಕೆಯನ್ನು ದಿನಾಂಕ: 20.09.2019ರಂದು ಸಲ್ಲಿಸಿರುತ್ತಾರೆ.

5. ದಿನಾಂಕ: 09/08/2023ರಂದು ಆ.ಸ.ನೌಕರರು ಸ್ಪೆಷಲ್ ಸಿ.ಸಿ. ನಂ.124/2018 ರ ಆದೇಶದ ಪ್ರತಿಯನ್ನು ಮತ್ತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವರ ವಜಾ ಆದೇಶ ದಿನಾಂಕ: 16/11/2021 ವನ್ನು ಕಚೇರಿಗೆ ಸಲ್ಲಿಸಿರುತ್ತಾರೆ. ಅಲ್ಲದೇ ಆ.ಸ.ನೌಕರರು ಸ್ಪೆಷಲ್ ಸಿ.ಸಿ. ನಂ.124/2018ರಲ್ಲಿಯ ಆದೇಶದ ವಿರುದ್ಧ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲ್ ನಂ.1158/2021 ದಾಖಲಿಸಿರುತ್ತಾರೆ.

6. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು–11), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಆ.ಸ.ನೌಕರರಾದ ಶ್ರೀ ರಾಧಾಕೃಷ್ಣ, ಉಪ ವಲಯ ಅರಣ್ಯಾಧಿಕಾರಿ, ಬಿ.ಬಿ.ಎಂ.ಪಿ., ಯಲಹಂಕ ವಲಯ, ಬೆಂಗಳೂರು ರವರು ಸ್ಪೆಷಲ್ ಸಿ.ಸಿ. ನಂ.124/2018ರಲ್ಲಿಯ ಆದೇಶದ ವಿರುದ್ಧ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲ್ ನಂ.1158/2021 ಬಾಕಿ ಇರುವುದರಿಂದ ಸದರಿಯವರ ವಿರುದ್ಧ ನಡೆಸುತ್ತಿರುವ ವಿಚಾರಣೆಯನ್ನು ಸಧ್ಯಕ್ಕೆ/ಪುನರ್‌ಸ್ಥಾಪಿತವಾಗುವವರೆಗೂ ಮುಂದುವರೆಸದಂತೆ ಅಭಿಪ್ರಾಯಿಸಿದ್ದಾರೆ.

7. ಪಾದಿತ ಸರ್ಕಾರಿ ನೌಕರರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಅಂಗೀಕರಿಸಿ ಆ.ಸ.ನೌಕರರಾದ ಶ್ರೀ ರಾಧಾಕೃಷ್ಣ, ಉಪ ವಲಯ ಅರಣ್ಯಾಧಿಕಾರಿ, ಬಿ.ಬಿ.ಎಂ.ಪಿ., ಯಲಹಂಕ ವಲಯ, ಬೆಂಗಳೂರು ರವರ ವಿರುದ್ಧದ ವಿಚಾರಣೆಯನ್ನು ಸಧ್ಯಕ್ಕೆ ಮುಂದುವರೆಸದೇ ಕ್ರಿಮಿನಲ್ ಅಪೀಲ್ ನಂ.1158/2021ರಲ್ಲಿ ಬರುವ ಆದೇಶದ ನಂತರ ಮುಂದಿನ ಕ್ರಮ ಕೈಗೊಳ್ಳಲು ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

8. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

28/8/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತ–2,
ಕರ್ನಾಟಕ ರಾಜ್ಯ.

**KARNATAKA LOKAYUKTA**

NO. UPLOK-1/DE/482/2018/ARE-11

M.S.Building,
Dr. B.R. Ambedkar Veedhi,
Bengaluru-560 001,
Date: 23/08/2023.

:: **REPORT** ::

Sub: Departmental Enquiry against Sri. V.Radhakrishna, Deputy R.F.O., BBMP, Yalahanka Zone, Bengaluru -reg.

Ref:
1. Report under section 12(3) of the KLA Act. 1984 in No.Compt/Uplok/BCD/918/2018/DRE-3, dated:23/06/2018.
2. Government Order No. ಅಪಜೀ 119 ಅಇವಿ 2018 Bengaluru, dated 15/10/2018.
3. Nomination Order No. UPLOK-1/DE/482/2018 Bengaluru, dated 25/10/2018.

*****

1. The Departmental Enquiry is initiated against Sri. V.Radhakrishna, Deputy R.F.O., BBMP, Yalahanka Zone, Bengaluru (hereinafter referred to as the Delinquent Government Officials, in short DGO) on the basis of the complaint dated 11/12/2015. The allegation in the complaint is that Sri. V.Radhakrishna while working as Deputy R.F.O.in BBMP, Yalahanka Zone, Bengaluru, in the year 2015, the

complainant being a contractor approached the DGO to accord permission to remove two jungle trees in order to carry out the construction work. The DGO demanded bribe of Rs.15,000/- and after negotiation, it was scaled down to Rs.7,000/-. The complainant has given part of bribe of Rs.2,000/- on 10/12/2015. The DGO has stated that his work will be completed only after payment of balance amount of Rs.5,000/- and the same conversation is recorded by complainant in his mobile.

2. As the complainant was not willing to pay the amount, after contacting Lokayukta Police, Bengaluru City Division lodged complaint before Police Inspector, Karnataka Lokayukta Police Station, Bengaluru City Division, Bengaluru (hereinafter referred to as "Investigating Officer". On the said complaint Investigating Officer registered case in Cr.No.75/2015 against the DGO for the offences punishable under section 7, 13(1)(d) r/w 13(2) of P.C. Act, 1988.

3. The Investigating Officer took up investigation and on 11/12/2015 at 8.30 to 8.35 p.m. DGO was caught red handed while demanding and accepting illegal gratification of Rs.5,000/- from the complainant near Veeresh Cinema Talkies, Bengaluru and the said amount was seized under mahazar after following post trap formalities by the Investigating Officer, Karnataka Lokayukta, Bengaluru City Division, Bengaluru. That DGO has failed to give satisfactory or convincing explanation in this

regard, when questioned by the said I.O. After completion of investigation the investigating officer has filed charge sheet against the DGO in the concerned jurisdictional Court.

4. Hon'ble Upalokayukta invoking power vested under section 7(2) of the Karnataka Lokayukta Act, 1984, took up investigation and on perusal of complaint, FIR, Mahazars, FSL report and other documents, found prima facie case and forwarded report dated 23/06/2018 U/s 12(3) of Karnataka Lokayukta Act, 1984 recommended the competent authority to initiate disciplinary proceedings against the DGO and to entrust the enquiry to the Hon'ble Upalokayukta, Karnataka under Rule 14-A of the KCS (CC& A) Rules 1957. The Government by order dated 09/10/2017 entrusted the matter to the Hon'ble Upalokayukta.

5. The Hon'ble Upalokayukta by order dated 25/10/2018, nominated Additional Registrar Enquiries-11 to conduct the enquiry.

6. The Articles of charge as framed by Additional Registrar Enquiries-11 is as follows:

23/8

## ಅನುಬಂಧ–1

## ದೋಷಾರೋಪಣೆ

ಆಪಾದಿತ ಸರ್ಕಾರಿ ನೌಕರರಾದ ಶ್ರೀ ರಾಧಾಕೃಷ್ಣ ಆದ ನೀವು ಬೆಂಗಳೂರಿನ ಯಲಹಂಕ ಬಿಬಿಎಂಪಿ ವಲಯದಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ 2015ನೆಯ ಇಸವಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಫಿರ್ಯಾದಿಯಾದ ಬೆಂಗಳೂರು ನಗರದ ಮುತ್ಯಾಲನಗರದ ಸಂಖ್ಯೆ 63, 15ನೆಯ ಅಡ್ಡ ರಸ್ತೆಯ ನಿವಾಸಿಯಾದ ಶ್ರೀ ರಾಮಕೃಷ್ಣರೆಡ್ಡಿ ನವರ್ ರವರು 1ನೆಯ ದರ್ಜೆಯ ಸಿವಿಲ್ ಗುತ್ತಿಗೆದಾರರಾಗಿದ್ದು ಬೆಂಗಳೂರು ನಗರದ ಯಲಹಂಕ ನ್ಯೂ ಟೌನ್ ದೊಡ್ಡಬಳ್ಳಾಪುರ ರಸ್ತೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ನೌಕರರ ವಸತಿ ಗೃಹ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಗುತ್ತಿಗೆ ಆಧಾರದ ಮೇರೆಗೆ ಕೈಗೊಂಡಿದ್ದು ಕಾಮಗಾರಿ ನಡೆಸಲಾಗುವ ಸ್ಥಳದಲ್ಲಿ ಎರಡು ಕಾಡು ಮರಗಳಿದ್ದು, ಸದರಿ ಮರಗಳನ್ನು ತೆರವುಗೊಳಿಸುವ ಸಂಬಂಧ ದಿನಾಂಕ;6–11–2015ರಂದು ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿರುವ ಯುಟಿಲಿಟಿ ಕಟ್ಟಡದ 17ನೇ ಮಹಡಿಯಲ್ಲಿರುವ ಬಿಬಿಎಂಪಿ ಸಹಾಯಕ ಅರಣ್ಯಾಧಿಕಾರಿ ಯವರ ಕಛೇರಿಯಲ್ಲಿ ಸದರಿ ಎರಡು ಕಾಡು ಮರಗಳನ್ನು ತೆರವುಗೊಳಿಸುವ ಸಂಬಂಧ ಅರ್ಜಿ ಸಲ್ಲಿಸಿದ್ದು ಆ ಸಂಬಂಧವಾಗಿ ಫಿರ್ಯಾದಿಯು ನಿಮ್ಮನ್ನು ದಿನಾಂಕ: 07/12/2015 ರಂದು ಮೊಬೈಲ್ ಮುಖಾಂತರ ಸಂಪರ್ಕಿಸಿದಾಗ ನೀವು ರೂ. 15,000/– ಅಕ್ರಮ ಸಂಭಾವನೆಯನ್ನು ಕೇಳಿ ನಂತರ ಆ ಮೊತ್ತವನ್ನು ರೂ. 7,000/– ಗಳಿಗೆ ಕಡಿತಗೊಳಿಸಿದ್ದು ತರುವಾಯ ದಿನಾಂಕ: 10/12/2015 ರಂದು ಮೊಬೈಲ್ ಮುಖಾಂತರ ಫಿರ್ಯಾದಿಯು ನಿಮ್ಮನ್ನು ಸಂಪರ್ಕಿಸಿದಾಗ ನೀವು ಮತ್ತೆ ಪುನ: ಅಕ್ರಮ ಸಂಭಾವನೆಯನ್ನು ಕೊಡುವಂತೆ ಒತ್ತಾಯಿಸಿ ಅದೇ ದಿನ ಎಂದರೆ ದಿನಾಂಕ: 10/12/2015 ರಂದು ಮದ್ಯಾಹ್ನ 3:30 ಗಂಟೆಗೆ ಫಿರ್ಯಾದಿಯು ನಿಮ್ಮನ್ನು ನಿಮ್ಮ ಕಛೇರಿಯಲ್ಲಿ ಭೇಟಿ ಮಾಡಿದಾಗ ನೀವು ಫಿರ್ಯಾದಿಯಿಂದ ರೂ. 2,000/– ಗಳನ್ನು ಅಕ್ರಮ ಸಂಭಾವನೆಯ ಕಂತಾಗಿ ಒತ್ತಾಯಿಸಿ ಪಡೆದುಕೊಂಡು ಮತ್ತೆ

ಪುನ: ರೂ. 5,000/- ಗಳ ಅಕ್ರಮ ಸಂಭಾವನೆಗೆ ಒತ್ತಾಯಿಸಿದ್ದು ತರುವಾಯ ದಿನಾಂಕ: 11/12/2015 ರಂದು ನೀವು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ವಿರೇಶ್ ಚಿತ್ರ ಮಂದಿರದ ಬಳಿ ಇರುವ ಗೋದ್ರೇಜ್ ಶೋರೂಂ ಬಳಿ ಫಿರ್ಯಾದಿಯಿಂದ ಮಿಕ್ಕುಳಿದ ಅಕ್ರಮ ಸಂಭಾವನೆ ರೂ. 5,000/- ಗಳನ್ನು ಅಂದು ರಾತ್ರಿ ಸುಮಾರು 8:30 ರಿಂದ 8:35ರ ಅವದಿಯಲ್ಲಿ ನೀವು ಫಿರ್ಯಾದಿಯಿಂದ ಒತ್ತಾಯಿಸಿ ಪಡೆದುಕೊಂಡು ನಂತರ ಬೆಂಗಳೂರು ನಗರ ವಿಭಾಗದ ಲೋಕಾಯುಕ್ತ ಆರಕ್ಷಕ ಠಾಣೆಯ ಅಪರಾಧ ಸಂಖ್ಯೆ: 75/2015 ರಲ್ಲಿನ ತನಿಖಾಧಿಕಾರಿಯಾದ ಆರಕ್ಷಕ ನಿರೀಕ್ಷಕರ ಮುಂದೆ ಸದರಿ ಪ್ರಕರಣದ ತನಿಖಾ ಕಾಲದಲ್ಲಿ ನೀವು ನಿಮ್ಮ ಬಳಿ ದಿನಾಂಕ: 11/12/2015 ರಂದು ರಾತ್ರಿ ಸುಮಾರು 8:30 ರಿಂದ 8:35 ಗಂಟೆಯ ಅವದಿಯಲ್ಲಿ ಹೊಂದಿದ್ದ ರೂ. 5,000/- ಗಳ ಬಗ್ಗೆ ನೀವು ತೃಪ್ತಿದಾಯಕ ಉತ್ತರವನ್ನು ನೀಡಲು ವಿಫಲರಾಗಿ ಕರ್ತವ್ಯಲೋಪವೆನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(ii)ಮತ್ತು(iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

7. The statement of imputations of misconduct as framed by Additional Registrar Enquiries-11 is as follows:

**ಅನುಬಂಧ-2**

**ದೋಷಾರೋಪಣೆಯ ವಿವರ**

ಫಿರ್ಯಾದಿಯಾದ ಶ್ರೀ ರಾಮಕೃಷ್ಣರೆಡ್ಡಿ ನವರ್ ಬಿನ್ ಲೇಟ್ ಎನ್. ಮಲ್ಲಾರೆಡ್ಡಿ, ನಂ.63, 15ನೇ ಅಡ್ಡ ರಸ್ತೆ, ಮುತ್ಯಾಲನಗರ, ಬೆಂಗಳೂರು-54 ಇವರು ಪ್ರಥಮ ದರ್ಜೆ ಸಿವಿಲ್ ಗುತ್ತಿಗೆದಾರರಾಗಿದ್ದು ಬೆಂಗಳೂರಿನ ಯಲಹಂಕ ಹೊಸ ಬಡಾವಣೆ, ದೊಡ್ಡಬಳ್ಳಾಪುರ ರಸ್ತೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ

23/8

ಮಂಡಳಿಯ ನೌಕರರ ವಸತಿ ಗೃಹಗಳ ಕಟ್ಟಡಗಳನ್ನು ನಿರ್ಮಿಸಲು ಗುತ್ತಿಗೆ ಪಡೆದುಕೊಂಡಿದ್ದು ಕಟ್ಟಡಗಳ ನಿರ್ಮಾಣ ಸ್ಥಳದಲ್ಲಿ ಇದ್ದ ಎರಡು ಕಾಡು ಮರಗಳನ್ನು ತೆರವುಗೊಳಿಸುವ ಸಂಬಂಧ ದಿನಾಂಕ;6-11-2015ರಂದು ಬೆಂಗಳೂರಿನ ಮಹಾತ್ಮಾಗಾಂಧಿ ರಸ್ತೆಯಲ್ಲಿರುವ ಯುಟಿಲಿಟಿ ಕಟ್ಟಡದ 17ನೇ ಮಹಡಿಯಲ್ಲಿರುವ ಬಿಬಿಎಂಪಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿಯಲ್ಲಿ ಸದರಿ ಎರಡು ಕಾಡು ಮರಗಳನ್ನು ತೆರವುಗೊಳಿಸುವ ಸಂಬಂಧ ಫಿರ್ಯಾದಿಯು ಅರ್ಜಿ ಸಲ್ಲಿಸಿದ್ದು ನಂತರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾದ ಶ್ರೀ ಸತ್ಯನಾರಾಯಣ ರವರನ್ನು ಮೊಬೈಲ್ ನಂಬರ್ ಸಂಖ್ಯೆ.9480683146ರಲ್ಲಿ ಸಂಪರ್ಕಿಸಿ ಅರ್ಜಿಯ ಬಗ್ಗೆ ವಿಚಾರಿಸಿದಾಗ ಸದರಿಯವರು ಆಪಾದಿತ ಸರ್ಕಾರಿ ನೌಕರರಾದ ನಿಮ್ಮನ್ನು ಭೇಟಿ ಮಾಡಿ ವಿಚಾರ ಮಾಡಲು ಹೇಳಿ ನಿಮ್ಮ ಮೊಬೈಲ್ ಸಂಖ್ಯೆಯನ್ನು ನೀಡಿದ್ದು ನಂತರ ಫಿರ್ಯಾದಿಯು ನಿಮ್ಮನ್ನು ಮೊಬೈಲ್ ಮೂಲಕ ವಿಚಾರಿಸಿದಾಗ ನೀವು ಸಂಬಂಧಪಟ್ಟ ನಕ್ಷೆಯನ್ನು ತಂದು ನೀಡಲು ಸೂಚಿಸಿದಂತೆ ಫಿರ್ಯಾದಿಯು ದಿನಾಂಕ:7-12-2015ರಂದು ನಕ್ಷೆಯನ್ನು ನಿಮಗೆ ನೀಡಿದಾಗ ನೀವು ಸದರಿ ತೆರವು ಕೆಲಸಕ್ಕೆ ರೂ.15,000/-ಗಳನ್ನು ನೀಡಬೇಕಾಗುತ್ತದೆ ಎಂದು ಹೇಳಿದ್ದು ಅಷ್ಟೊಂದು ಹಣ ನೀಡಲು ಆಗುವುದಿಲ್ಲವೆಂದು ಫಿರ್ಯಾದಿಯು ನಿಮಗೆ ತಿಳಿಸಿದಾಗ ನೀವು ರೂ.7,000/-ಗಳನ್ನು ಕೊಡಬೇಕೆಂದು ತಿಳಿಸಿದ್ದು, ದಿನಾಂಕ:10-12-2015ರಂದು ಮೊಬೈಲ್‌ನಲ್ಲಿ ನಿಮ್ಮನ್ನು ಫಿರ್ಯಾದಿಯು ಸಂಪರ್ಕಿಸಿದಾಗ ನೀವು ಹಣ ಕೊಟ್ಟರೆ ಕೆಲಸ ಮಾಡಿಕೊಡುವುದಾಗಿ ಹೇಳಿದ್ದು ಅದೇ ದಿನ ಫಿರ್ಯಾದಿಯು ನಿಮ್ಮನ್ನು ಮದ್ಯಾಹ್ನ 3-30 ಗಂಟೆಗೆ ನಿಮ್ಮ ಕಛೇರಿಯಲ್ಲಿ ಭೇಟಿ ಮಾಡಿದಾಗ ನೀವು ರೂ.2,000/-ಗಳನ್ನು ಪಡೆದುಕೊಂಡು ರೂ.5,000/-ಗಳನ್ನು ನೀಡುವಂತೆ ಒತ್ತಾಯಿಸಿದ್ದು ಫಿರ್ಯಾದಿಗೆ ಹಣ ಕೊಟ್ಟು ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದ ಕಾರಣ ದಿನಾಂಕ:11-12-2015ರಂದು ಬೆಂಗಳೂರಿನ ನಗರ ವಿಭಾಗದ ಲೋಕಾಯುಕ್ತ ಆರಕ್ಷಕ ಠಾಣೆಗೆ ಹಾಜರಾಗಿ ಅಲ್ಲಿನ ಆರಕ್ಷಕ ನಿರೀಕ್ಷಕರ ಮುಂದೆ ದೂರನ್ನು ಸಲ್ಲಿಸಿದ್ದು ಸದರಿ ದೂರಿನ ಆಧಾರದ ಮೇಲೆ ಬೆಂಗಳೂರು ನಗರ ವಿಭಾಗದ ಲೋಕಾಯುಕ್ತ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರು ನಿಮ್ಮ ವಿರುದ್ಧ ಬೆಂಗಳೂರು

23/8

ನಗರ ವಿಭಾಗದ ಲೋಕಾಯುಕ್ತ ಆರಕ್ಷಕ ಠಾಣೆಯ ಅಪರಾಧ ಸಂಖ್ಯೆ: 75/2015 ರಲ್ಲಿ ಲಂಚ ಪ್ರತಿಬಂಧಕ ಕಾಯ್ದೆ ವಿಧಿ 7 ರಡಿಯಲ್ಲಿ ಪ್ರಕರಣ ನೊಂದಾಯಿಸಿ ಪ್ರಥಮ ವರ್ತಮಾನ ವರದಿಯನ್ನು ಬೆಂಗಳೂರಿನ 23ನೆಯ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯಕ್ಕೆ ನಿವೇದಿಸಿರುತ್ತಾರೆ.

ದೂರು ದಾಖಲಾದ ಬಳಿಕ ತನಿಖಾಧಿಕಾರಿಯವರು ಒಬ್ಬರು ನೆರಳು ಸಾಕ್ಷಿ ಹಾಗೂ ಒಬ್ಬರು ಪಂಚ ಸಾಕ್ಷಿಯನ್ನು ಬೆಂಗಳೂರು ನಗರ ವಿಭಾಗದ ಲೋಕಾಯುಕ್ತ ಆರಕ್ಷಕ ಠಾಣೆಗೆ ಬರಮಾಡಿಕೊಂಡು ಅವರಿಬ್ಬರಿಗೆ ಫಿರ್ಯಾದಿಯನ್ನು ಪರಿಚಯಿಸಿ ಅವರಿಬ್ಬರನ್ನು ಕರೆಸಿದ ಉದ್ದೇಶವನ್ನು ತಿಳಿಸಿರುತ್ತಾರೆ. ನಂತರ ಫಿರ್ಯಾದಿಯು ತನಿಖಾಧಿಕಾರಿಯವರ ಮುಂದೆ ರೂಪಾಯಿ ಐದು ನೂರು ಮುಖಬೆಲೆಯ ಹತ್ತು ನೋಟುಗಳನ್ನು ಹಾಜರುಪಡಿಸಿದ್ದು ಆ ನೋಟುಗಳ ಸಂಖ್ಯೆಗಳನ್ನು ತನಿಖಾಧಿಕಾರಿಯವರು ಒಂದು ಬಿಳಿ ಹಾಳೆಯ ಮೇಲೆ ಅವರ ಸಿಬ್ಬಂದಿ ಮುಖಾಂತರ ನಮೂದು ಮಾಡಿಸಿ ನಂತರ ನೀರು ಮತ್ತು ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಬಳಸಿ ಅವರ ಸಿಬ್ಬಂದಿ ಮುಖಾಂತರ ದ್ರಾವಣವನ್ನು ತಯಾರಿಸಿ ಆ ದ್ರಾವಣದ ಮಾದರಿಯನ್ನು ಒಂದು ಶೀಸೆಯಲ್ಲಿ ಪಡೆದುಕೊಂಡು ತರುವಾಯ ಪಂಚ ಸಾಕ್ಷಿಯಾದ ಜೆ.ಕೃಷ್ಣಮೂರ್ತಿ ರವರ ಮುಖಾಂತರ ಫಿರ್ಯಾದಿಯ ಪ್ಯಾಂಟಿನ ಎಡ ಹಿಂಭಾಗದ ಜೇಬಿನಲ್ಲಿರಿಸಿ ನಂತರ ಮಿಕ್ಕುಳಿದ ದ್ರಾವಣದಲ್ಲಿ ಜೆ.ಕೃಷ್ಣಮೂರ್ತಿ ರವರ ಕೈಗಳ ಬೆರಳುಗಳನ್ನು ತೊಳೆಸಿದ್ದು ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು ಆ ದ್ರಾವಣವನ್ನು ಶೀಸೆಯೊಂದರಲ್ಲಿ ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರ ಮುಂದೆ ಫಿರ್ಯಾದಿಯು ಹಾಜರು ಮಾಡಿದ ಧ್ವನಿ ಮುದ್ರಕದ ಅಂಶಗಳನ್ನು ತನಿಖಾಧಿಕಾರಿಯವರು ಲಿಪೀಕರಣಗೊಳಿಸಿ ಆ ಸಂಭಾಷಣೆಗಳನ್ನು ಒಂದು ಕಾಂಪ್ಯಾಕ್ಟ್ ಡಿಸ್ಕ್‌ಗೆ ಅಳವಡಿಸಿ ಅದನ್ನು ವಶಪಡಿಸಿಕೊಂಡಿರುತ್ತಾರೆ. ನಿಮ್ಮನ್ನು ಭೇಟಿಯಾಗುವಂತೆ ತನಿಖಾಧಿಕಾರಿಯವರು ಫಿರ್ಯಾದಿಗೆ ತಿಳಿಸಿ ಒಂದು ವೇಳೆ ಅಕ್ರಮ ಸಂಭಾವನೆ ಬೇಕೆಂದು ನೀವು ಕೇಳಿದರೆ ಮಾತ್ರ ನಿಮಗೆ ಕೊಡುವಂತೆ ಮತ್ತು ಒಂದು

23/8

ವೇಳೆ ನೀವು ಪುಡಿ ಲೇಪಿತ ನೋಟುಗಳನ್ನು ಪಡೆದುಕೊಂಡರೆ ಆ ಬಗ್ಗೆ ಸೂಚನೆಯನ್ನು ಕೊಡಬೇಕೆಂದು ತಿಳಿಸಿ ಫಿರ್ಯಾದಿಯೊಂದಿಗೆ ಇದ್ದು ನಿಮ್ಮ ಹಾಗೂ ಫಿರ್ಯಾದಿಯ ನಡುವೆ ನಡೆಯುವ ವಿದ್ಯಮಾನಗಳನ್ನು ಗಮನಿಸಿಕೊಳ್ಳುವಂತೆ ತನಿಖಾಧಿಕಾರಿಯವರು ನೆರಳು ಸಾಕ್ಷಿಗೆ ಸೂಚನೆ ಕೊಟ್ಟು ಪ್ರಾಯೋಗಿಕ ಪಂಚನಾಮೆಯನ್ನು ಜರುಗಿಸಿರುತ್ತಾರೆ.

ಪ್ರಾಯೋಗಿಕ ಪಂಚನಾಮೆ ಪ್ರಕ್ರಿಯೆಗಳು ನಡೆದ ನಂತರ ನಿಮ್ಮನ್ನು ನೆರಳು ಸಾಕ್ಷಿಯ ಜೊತೆ ಅದೇ ದಿನ ಎಂದರೆ ದಿನಾಂಕ: 11/12/2015 ರಂದು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ವಿರೇಶ್ ಚಿತ್ರ ಮಂದಿರದ ಬಳಿ ಇರುವ ಗೋದ್ರೆಜ್ ಶೋರೂಂ ಬಳಿ ಫಿರ್ಯಾದಿಯು ಭೇಟಿ ಮಾಡಿ ಅವರ ಕೆಲಸದ ಬಗ್ಗೆ ವಿಚಾರಿಸಿದಾಗ ನೀವು ಮಿಕ್ಕುಳಿದ ಅಕ್ರಮ ಸಂಭಾವನೆ ರೂ. 5,000/- ಗಳನ್ನು ಕೊಡುವಂತೆ ಅಂದು ರಾತ್ರಿ ಸುಮಾರು 8-30 ರಿಂದ 8-35ರ ಅವದಿಯಲ್ಲಿ ನೀವು ಒತ್ತಾಯಿಸಿ ಪಡೆದುಕೊಂಡಿದ್ದು ಸದರಿ ಪುಡಿ ಲೇಪಿತ ಹಣವನ್ನು ತನಿಖಾಧಿಕಾರಿಯವರು ನಿಮ್ಮಿಂದ ವಶಪಡಿಸಿಕೊಂಡಿರುತ್ತಾರೆ.

ತನಿಖಾಧಿಕಾರಿಯವರು ಅವರ ಸಿಬ್ಬಂದಿಗಳ ಮುಖಾಂತರ ನೀರು ಮತ್ತು ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಬಳಸಿ ದ್ರಾವಣವನ್ನು ತಯಾರಿಸಿ ದ್ರಾವಣದ ಮಾದರಿಯನ್ನು ಒಂದು ಶೀಸೆಯಲ್ಲಿ ಪಡೆದುಕೊಂಡಿರುತ್ತಾರೆ. ಮಿಕ್ಕುಳಿದ ದ್ರಾವಣವನ್ನು ಎರಡು ಪ್ರತ್ಯೇಕವಾದ ಬಟ್ಟಲುಗಳಿಗೆ ಸುರಿದು ತನಿಖಾಧಿಕಾರಿಯವರು ನಿಮ್ಮ ಬಲಗೈ ಬೆರಳುಗಳನ್ನು ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ತೊಳೆಸಿರುತ್ತಾರೆ ಮತ್ತು ನಿಮ್ಮ ಎಡಗೈ ಬೆರಳುಗಳನ್ನು ಮತ್ತೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ತೊಳೆಸಿರುತ್ತಾರೆ. ನಿಮ್ಮ ಬಲಗೈ ಮತ್ತು ಎಡಗೈ ಬೆರಳುಗಳನ್ನು ತೊಳೆಸಲಾದ ದ್ರಾವಣಗಳು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು ಅವುಗಳನ್ನು ಪ್ರತ್ಯೇಕವಾದ ಶೀಸೆಗಳಲ್ಲಿ ತನಿಖಾಧಿಕಾರಿಯವರು ವಶಪಡಿಸಿಕೊಂಡು ನಂತರ ನಿಮ್ಮನ್ನು ದಸ್ತಗಿರಿ ಮಾಡಿ ಆ ಸ್ಥಳವು ಮುಂದಿನ ಪ್ರಕ್ರಿಯೆಗೆ ಸೂಕ್ತವಲ್ಲವೆಂದು ಕಂಡು ಬಂದ ಕಾರಣ ನಿಮ್ಮನ್ನು

23/8

ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಗಳು, ಫಿರ್ಯಾದಿ, ನೆರಳು ಸಾಕ್ಷಿ, ಪಂಚ ಸಾಕ್ಷಿ ರವರ ಸಮೇತ ಬೆಂಗಳೂರು ಲೋಕಾಯುಕ್ತ ನಗರ ವಿಭಾಗದ ಆರಕ್ಷಕ ಠಾಣೆಗೆ ಕರೆ ತಂದು ಟ್ರ್ಯಾಪ್ ಪಂಚನಾಮೆಯನ್ನು ಜರುಗಿಸಿರುತ್ತಾರೆ.

ಮೇಲ್ಕಂಡ ಹಣವನ್ನು ಮೇಲ್ಕಂಡ ಸ್ಥಳ ಮತ್ತು ವೇಳೆ ನೀವು ಹೊಂದಿದ್ದ ಬಗ್ಗೆ ಸೂಕ್ತ ಉತ್ತರವನ್ನು ತನಿಖಾಧಿಕಾರಿಯವರ ಮುಂದೆ ಅಪರಾಧ ಸಂಖ್ಯೆ: 75/2015 ರಲ್ಲಿನ ಪ್ರಕರಣದಲ್ಲಿ ನೀವು ನೀಡಲು ವಿಫಲರಾಗಿರುತ್ತೀರಿ. ತನಿಖಾಧಿಕಾರಿಯವರು ತನಿಖೆಯನ್ನು ಮುಕ್ತಾಯಗೊಳಿಸಿ ನಿಮ್ಮ ವಿರುದ್ಧ ಆಪಾದನಾ ಪಟ್ಟಿಯನ್ನು ಬೆಂಗಳೂರಿನ 23ನೆಯ ಹೆಚ್ಚುವರಿ ಸಿವಿಲ್ ಮತ್ತು ಸತ್ರ ನ್ಯಾಯಾಲಯಕ್ಕೆ ಲಂಚ ಪ್ರತಿಬಂಧಕ ಕಾಯ್ದೆ ವಿಧಿ 7, 13(1)(ಡಿ) ಜೊತೆಗೋದಿ 13(2) ರಡಿಯಲ್ಲಿ ಸಲ್ಲಿಸಿರುತ್ತಾರೆ.

ತನಿಖಾಧಿಕಾರಿಯವರು ತನಿಖಾ ಕಾಲದಲ್ಲಿ ವಶಪಡಿಸಿಕೊಂಡ ಎಲ್ಲಾ ದಾಖಲಾತಿಗಳ ಪ್ರಕಾರ ಆಪಾದಿತರುಗಳು ದೂರುದಾರರ ಕೆಲಸವನ್ನು ಮಾಡಿಕೊಡಲು ದಿನಾಂಕ: 11-12-2015ರಂದು ರೂ.5,000/- ಲಂಚದ ಹಣವನ್ನು ಪಡೆದುಕೊಳ್ಳುವಾಗ ನೆರಳು ಸಾಕ್ಷಿದಾರರ ಸಮಕ್ಷಮದಲ್ಲಿ ಸಿಕ್ಕಿಬಿದ್ದಿದ್ದು ಆ ರೀತಿಯಾಗಿ ಆಪಾದಿತ ಸರ್ಕಾರಿ ನೌಕರ ಕರ್ತವ್ಯಲೋಪವನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(ii) ಮತ್ತು (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

ಸದರಿ ದೂರಿಗೆ ಸಂಬಂಧಿಸಿದಂತೆ ನಿಮಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ನೀವು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವು ಸಮಂಜಸವಲ್ಲವೆಂದು ಕಂಡು ಬಂದ ಕಾರಣ ನಿಮ್ಮ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ವಿಧಿ 12(3) ರಡಿಯಲ್ಲಿ

23/8

ವರದಿಯನ್ನು ಸಲ್ಲಿಸಿ, ನಿಮ್ಮ ವಿರುದ್ದ ಶಿಸ್ತು ಕ್ರಮವನ್ನು ಜರುಗಿಸಲು ತಿಳಿಸಲಾಗಿರುತ್ತದೆ. ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ನಿಮ್ಮ ವಿರುದ್ಧ ಶಿಸ್ತು ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿರುತ್ತದೆ. ಆದ್ದರಿಂದ ನಿಮ್ಮ ವಿರುದ್ಧ ಈ ಮೇಲ್ಕಂಡ ದೋಷಾರೋಪಣೆ.

8. Notice of Articles of charge, statement of imputation of misconduct with list of witnesses and documents was served upon the DGO. In response to the service of articles of charge, DGO entered appearance before this ARE-11 on 03/07/2019 and engaged advocate for defence on 20/09/2019. In the course of first oral statement of the DGO recorded on 03/07/2019 he pleaded not guilty and claimed to be enquired. **The date of Retirement of DGO is 30/04/2037.**

9. The DGO has filed written statement dated 20/09/2019 requesting to terminate the proceedings against him.

10. The disciplinary authority has examined one witness and got 7 document exhibited.

11. On 09/08/2023 the DGO filed memo with copy of Order passed on Spl.CC.No.124/2018 and dismissal order dated 16/11/2021 issued by Chief Conservator Officer, Ballari and seeks to stop the DE proceedings. Xerox copies of the

orders in Spl.CC.No.124/2018 and dismissal order are placed in file.

12. On perusal of the said documents it reveals that DGO has preferred Criminal Appeal No.1158/2021 on the file of Hon'ble High Court of Karnataka against the judgment of conviction and order of sentence dated 19/07/2021 passed by the XXVI Additional City Civil & Sessions Judge and Special Judge, Bengaluru in Spl.Case No.124/2018 convicting the accused/DGO for the offence punishable u/s 7 and 13(2) of Prevention of Corruption Act.

13. Further, as the DGO is dismissed from service and ceases to be a government servant vide order No.ಎ4:ಸಿಬ್ಬಂದಿ:ಸಿಆರ್-29:2021-22 dated 16/11/2021 of Chief Conservator of Forests, Bellary, it is submitted to Hon'ble Upalokayukta for kind approval to stop the proceedings till any order of reinstatement and put up report Accordingly.

14. On 16/08/2023 Hon'ble Upalokayukta has approved para 63 of the order sheet. Hence, proceedings against DGO is stopped till any order of reinstatement of DGO and report is submitted accordingly.

23/8

15. Submitted to Hon'ble Upalokayukta, for kind approval and necessary action in the matter.

23/8/2023

**(J.P. Archana)**
Additional Registrar (Enquiries-11),
Karnataka Lokayukta,
Bangalore.

**ANNEXURES**

List of witnesses examined on behalf of the Disciplinary Authority:-

PW1:- Sri. Ramakrishna Reddinnavar

List of documents marked on behalf of Disciplinary Authority:-

| | |
|---|---|
| Ex P1 | Attested copy of complaint dated 11/12/2015. |
| Ex P2 | Attested copy of License, Work order and application given to BBMP Forest and Google map. |
| Ex P3 | Attested copy of list of currency notes. |
| Ex.P4 | Attested copy of pre-trap mahazar dated 11/12/2015. |
| Ex P5 | Attested copy of transcription dated 11/12/2015. |
| Ex P6 | Attested copy of permission letter dated 07/12/2015. |
| Ex P7 | Attested copy of trap mahazar dated 11/12/2015. |

23/8

List of documents marked on behalf of Defence:- Nil.

23/8/2023

**(J.P.Archana)**
Additionl Registrar (Enquiries-11),
Karnataka Lokayukta, Bangalore.